Linking of Suvarnavati and Chikkahole Projects in Chamarajanagar Taluk.

780. SRI M. C. BASAPPA (Chamarajanagar).—Will the Minister of State for Major and Medium Irrigation be pleased to state.—

(*a*) Whether the Government have received any proposal to link the two projects, *i.e.* Suvarnavati and Chikkahole in Chamarajanagar Taluk through a link canal;

(*b*) if so, when it is likely to be taken up?

SRI B. B. CHIMMANAKATTI.—(Minister of State for Major and Medium Irrigation) —

(*a*) No. Only request for the proposal has been received.

(*b*) The question does not arise in view of reply to question (a) above.

ಶ್ರೀ ಎಂ. ಸಿ. ಬಸಪ್ಪ.—ಸ್ವಾಮಿ ನನ ''ಎ'' ಪ್ರಶ್ನೆಗೆ ಉತ್ತರವಾಗಿ ಇಲ್ಲವೆಂದು ಸದರಿ ಸಲಹೆಯ ಬಗ್ಗೆ ಕೋರಿಕೆ ಮಾತ್ರ ಬಂದಿದೆ ಎಂದು ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿರುತ್ತಾರೆ ನಾನು ಈಗಾಗಲೇ ಕಾಗದವನ್ನೂ ಕೂಡ ಬರೆದಿದ್ದೆ. ಈಗಲಾದರೂ ಅದರ ಇನ್‌ವೆಸ್ಟಿಗೇಷನ್ ಮಾಡಿಸುತ್ತೀರಾ, ಆಥವಾ ಸಲಹೆಯಾಗಿ ತೆಗೆದುಕೊಳ್ಳುತ್ತಿರಾ ತಿಳಿಸಬೇಕು. ಈಗ ಸರ್ಕಾರಕ್ಕೆ ಪತ್ರ ಬಂದ ತಕ್ಷಣವೇ ಪ್ರತಿಯೊಂದನ್ನು ಪ್ರಿಲಿಮಿನರಿ ಇನ್‌ವೆಸ್ಟಿಗೇಷನ್ ಮಾಡುವುದಕ್ಕೆ ಚೀಫ್ ಇಂಜಿನಿಯರ್ ರವರಿಗೆ ತಿಳಿಸಿದ್ದೀರಾ? ಇದನ್ನು ಒಂದು ಸಲಹೆ ಎಂದು ತಿಳಿದುಕೊಂಡು, ಸಲಹೆಯೇ ಬಂದಿಲ್ಲವೆಂದು ಪ್ರಶ್ನೆಗೆ ಉತ್ತರ ಕೊಟ್ಟಿದ್ದರೆ ಅದು ತಪ್ಪಾಗುತ್ತದೆ.

ಶ್ರೀ ಬಿ. ಬಿ. ಚಿಮ್ಮನಕಟ್ಟಿ.—ಮಾನ್ಯ ಅಧ್ಯಕ್ಷರೇ ಇದರ ಬಗ್ಗೆ ಪ್ರಿಲಿಮಿನರಿ ಇನ್‌ವೆಸ್ಟಿಗೇಷನ್ ಪೂರ್ತಿಯಾಗಿ ಆಗಿಲ್ಲ. ಬಹುಶಃ ಇದು ಇನ್ನು ಒಂದು ತಿಂಗಳ ಕಾಲದಲ್ಲಿಯೇ ಮುಗಿಯಬಹುದು. ಪ್ರೆಲಿಮಿನರಿ ಇನ್‌ವೆಸ್ಟಿಗೇಷನ್ ಮುಗಿದ ತಕ್ಷಣವೇ ರಿಪೋರ್ಟ್‌ನ್ನು ತರಿಸಿಕೊಂಡು ನಿರ್ದಿಷ್ಟವಾದ ಉತ್ತರವನ್ನು ಹೇಳುತ್ತೇನೆ.

ಶ್ರೀ ಎಂ. ಸಿ. ಬಸಪ್ಪ.—ನಾನು ಬರೆದಿರತಕ್ಕಂಥ ಲೆಟರ್‌ನಲ್ಲಿ ಎರಡು ರಿವರ್ ವ್ಯಾಲಿ ಇರುತ್ತದೆ ಇದರಲ್ಲಿ ಒಂದರಲ್ಲಿ ಸರ್ಪಲಸ್ ಇರುತ್ತದೆ ಮತ್ತೊಂದರಲ್ಲಿ ಡಿಫಿಸಿಟ್ ಇರುತ್ತದೆ. ಎರಡನ್ನೂ ಲಿಂಕ್ ಮಾಡಲು ಸಲಹೆಯನ್ನು ಕೊಟ್ಟಿದ್ದೇನೆ. ಇದರ ಬಗ್ಗೆ ಪ್ರಿಲಿಮಿನರಿ ರಿಪೋರ್ಟ್ ತಮ್ಮ ಮುಂದೆ ಇದಿಯೇ?

ಶ್ರೀ ಬಿ. ಬಿ. ಚಿಮ್ಮನಕಟ್ಟಿ.—ಪ್ರಿಲಿಮಿನರಿ ರಿಪೋರ್ಟ್ ಬಂದಿಲ್ಲ. ಕೊಟ್ಟಿರತಕ್ಕಂಥ ಇರಿಗೇಷನ್ ಟ್ಯಾಂಕ್‌ಗಳಲ್ಲಿ ಒಂದು ನೀರು ಇರತಕ್ಕಂಥ ಟ್ಯಾಂಕ್‌ನಿಂದ ಇನ್ನೊಂದು ನೀರಿಲ್ಲದ ಟ್ಯಾಂಕ್‌ಗೆ ಕ್ಯಾನಲ್ ಮುಖಾಂತರ ನೀರನ್ನು ಹಾಯಿಸಿ ಅಚ್ಚುಕಟ್ಟು ಮಾಡುತ್ತೇವೆಂದು ರಿಪೋರ್ಟ್ ಕೊಟ್ಟಿದ್ದಾರೆ. ಆದ್ದರಿಂದ ಪ್ರಿಲಿಮಿನರಿ ರಿಪೋರ್ಟ್ ಏನು ಇರುತ್ತದೆ ಅದನ್ನು ತರಿಸಿ ನೋಡುತ್ತೇನೆ.

ಶ್ರೀ ಎಂ. ಸಿ. ಬಸಪ್ಪ.—ಫಿಜಿಬಲಿಟಿ ರಿಪೋರ್ಟ್ ತರಿಸುತ್ತೇವೆಂದು ಆಶ್ವಾಸನೆಯನ್ನು ಕೊಟ್ಟಿದ್ದೀರಿ. ಫೇಸಿಬಲಿಟಿ ಇದ್ದರೆ ಈ ವರ್ಷದ ಕಾರ್ಯಕ್ರಮದಲ್ಲಿ ವರದಿಯನ್ನು ತರಿಸಿ ಸೇರಿಸುವುದಕ್ಕೆ ಆಶ್ವಾಸನೆಯನ್ನು ಕೊಡುತ್ತೀರಾ?.

ಶ್ರೀ ಬಿ. ಬಿ. ಚಿಮ್ಮನಕಟ್ಟಿ.—ಎಕನಾಮಿಕಲ್ ಫೀಸಿಬಲಿಟಿ ಮತ್ತು ಟೆಕ್ನಿಕಲ್ ಫೀಸಿಬಲಿಟಿ ಇದ್ದರೆ ಹಣಕಾಸಿನ ಪರಿಸ್ಥಿತಿಯನ್ನು ನೋಡಿಕೊಂಡು ಪ್ರಿಲಿಮಿನರಿ ರಿಪೋರ್ಟ್ ಬಂದ ಮೇಲೆ ತೀರ್ಮಾನ ತೆಗೆದುಕೊಳ್ಳುತ್ತೇನೆಂದು ಹೇಳುತ್ತೇನೆ.